ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401
Office of the Deputy Conservator of Forests, Sagar Forest Division, Sagar– 577401
Phone No. : 08183 226071 Email: Sagardcf@rediffmail.com

ಕ್ರ: ಬಿ1/ಭೂಮಿ/ಎಫ್.ಸಿ/ಜಿ.ಎಲ್/38788/2019-20 ದಿ:03-03-2022

ಗೆ,

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು
ಶಿವಮೊಗ್ಗ ವೃತ್ತ, ಶಿವಮೊಗ್ಗ

ಮಾನ್ಯರೇ,

ವಿಷಯ :- Diversion of 6.073 hectare of forest land in Sy No 40 of Guduginakoppa Village and Sy No 103 &164 of Udri village, Kasaba Hobli, Soraba Taluk, Shivamogga District (Sagar Forest Division) for laying 110kv SC line on DC Towers from the existing 110/11KV Thogarsi substation to the proposed 1x10MVA 110/11 KV Substation at kuppagadde in soraba taluk, Shivamogga District in favor of the Executive Engineer (Electrical), Major works Division, Karanataka power transmission Corporation Limited (KPTCL), Shivmogga.

ಉಲ್ಲೇಖ :-
1. ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ( ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: Old file No: A5(3).GFL/CR-3/2018-19, E-Office file No: KFD/HOFF/A5-3(GFL)/13/2018-FC DT: 07.08.2021
2. ತಮ್ಮ ಕಛೇರಿ ಪತ್ರ ಸಂಖ್ಯೆ: 21.08.2021
3. ಈ ಕಛೇರಿ ಸಮ ಪತ್ರದ ದಿನಾಂಕ: 24.08.2021
4. ಈ ಕಛೇರಿ ಪತ್ರ ಸಂಖ್ಯೆ: ಬಿ1/ಭೂಮಿ/ಎಫ್.ಸಿ/ಜಿ.ಎಲ್-1190/2019-20 ದಿನಾಂಕ: 09.10.2020
5. ಕಾರ್ಯ ನಿರ್ವಾಹಕ ಇಂಜಿನೀಯರ್ (ವಿ) ಬೃಹತ್ ಕಾಮಗಾರಿ ವಿಭಾಗ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಬಾಲ್ ರಾಜ್ ಅರಸ್ ರಸ್ತೆ, ಶಿವಮೊಗ್ಗ. ಇವರ ಕಛೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ).ಬೃಕಾಉವಿ-1/ಶಿ/2021-22/299-305 ದಿನಾಂಕ 15.02.2022

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1)ರ ಪತ್ರದಲ್ಲಿ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಕುಪ್ಪಗಡ್ಡೆ ಗ್ರಾಮದಿಂದ ತೊಗರ್ಸಿ ವಿದ್ಯುತ್ ಉಪ ಕೇಂದ್ರದವರೆಗೆ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 110/11 ಕೆವಿ ವಿದುತ್ ಸರಬರಾಜು ಮಾರ್ಗದ ಯೋಜನೆಯ ಬಗ್ಗೆ ಪ್ರಸ್ತಾಪಿತ ಪ್ರದೇಶದ Details of encroachments in the form of cultivation, present status of rights, status of FRA Compliance.NOC from claimant in the case of claim being already settled in their favor etc. Further it is also requested to examine on the

feasibility of up gradation of existing lines so that diversion of forest land can be avoided/minimizedರ ಬಗ್ಗೆ ಮಾಹಿತಿಯನ್ನು ಕೋರಿರುತ್ತಾರೆ.

ಮುಂದುವರೆದು ಉಲ್ಲೇಖ (2)ರ ಪತ್ರದಲ್ಲಿ ತಾವು ಮೇಲ್ಕಂಡ ಮಾಹಿತಿಯನ್ನು ಒದಗಿಸುವಂತೆ ಸೂಚನೆಯನ್ನು ನೀಡಿದ್ದು, ಆ ಪ್ರಕಾರವಾಗಿ ಉಲ್ಲೇಖ (1)ರಲ್ಲಿ ಕೇಳಲಾಗಿರುವ ಮಾಹಿತಿಯನ್ನು ಒದಗಿಸುವಂತೆ ಉಪಯೋಗಿ ಸಂಸ್ಥೆಗೆ ಉಲ್ಲೇಖ (3)ರಲ್ಲಿ ಪತ್ರ ವ್ಯವಹರಿಸಲಾಗಿರುತ್ತದೆ. ನಂತರ ಉಪಯೋಗಿ ಸಂಸ್ಥೆಯವರು ಉಲ್ಲೇಖ (5)ರಲ್ಲಿ ಈ ಕಛೇರಿಗೆ ಉಲ್ಲೇಖ (1)ರಲ್ಲಿ ಕೇಳಲಾಗಿರುವ ಮಾಹಿತಿಯನ್ನು ಒದಗಿಸಿರುತ್ತಾರೆ. ಸದರಿ ಮಾಹಿತಿಯ ವಿವರ ಈ ಕೆಳಗಿನಂತಿದೆ.

- ಪ್ರಸ್ತಾಪಿತ ಯೋಜನಾ ಪ್ರದೇಶವು ಗುಡಗಿನಕೊಪ್ಪ ಗ್ರಾಮದ ಸರ್ವೇ ನಂಬರ್ 40ರಲ್ಲಿ 0.6631 ಹೆಕ್ಟರ್ ಅರಣ್ಯ ಪ್ರದೇಶ ಹಾಗೂ ಉದ್ರಿ ಗ್ರಾಮದ ಸರ್ವೇ ನಂಬರ್ 164ರಲ್ಲಿ 4.20607 ಹೆಕ್ಟರ್ ಅರಣ್ಯ ಪ್ರದೇಶ ಮತ್ತು ಉದ್ರಿ ಗ್ರಾಮದ ಸರ್ವೇ ನಂಬರ್ 103ರಲ್ಲಿ 1.204038ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಹಾದು ಹೋಗಲಿದ್ದು ಒಟ್ಟಾರೆ 6.073 ಅರಣ್ಯ ಪ್ರದೇಶ ಈ ಯೋಜನೆಯಲ್ಲಿ ಬಳಕೆಯಾಗಲಿದೆ. ಗುಡಗಿನಕೊಪ್ಪ ಗ್ರಾಮದ ಸರ್ವೇ ನಂಬರ್ 40ರಲ್ಲಿ 0.6631 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಯಾವುದೇ ಅರಣ್ಯ ಪ್ರದೇಶದ ಒತ್ತುವರಿ ಇರುವುದಿಲ್ಲ. ಆದರೆ ಉದ್ರಿ ಗ್ರಾಮದ ಸರ್ವೇ ನಂಬರ್ 164ರಲ್ಲಿ 4.20607 ಹೆಕ್ಟರ್ ಅರಣ್ಯ ಪ್ರದೇಶ ಮತ್ತು ಉದ್ರಿ ಗ್ರಾಮದ ಸರ್ವೇ ನಂಬರ್ 103ರಲ್ಲಿ 1.204038ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಅರಣ್ಯ ಒತ್ತುವರಿಯು ಇರುತ್ತದೆ.
- ಗುಡಗಿನಕೊಪ್ಪ ಗ್ರಾಮದ ಸರ್ವೇ ನಂಬರ್ 40ರಲ್ಲಿ 0.6631 ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಯಾವುದೇ ಅರಣ್ಯ ಪ್ರದೇಶದ ಒತ್ತುವರಿ ಇಲ್ಲದೆ ಇರುವುದರಿಂದ ಅರಣ್ಯ ಹಕ್ಕು ಕಾಯ್ದೆಯಡಿ ಅರ್ಜಿಗಳು ಸದರಿ ಸರ್ವೆ ನಂಬರ್‌ಗೆ ಸಂಬಂಧಿಸಿದಂತೆ ಸ್ವೀಕೃತವಾಗಿರದ ಕಾರಣ ಸಾಗುವಳಿ ಸಕ್ರಮಾತಿಯು ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಉದ್ರಿ ಗ್ರಾಮದ ಸರ್ವೇ ನಂಬರ್ 164ರಲ್ಲಿ 4.20607 ಹೆಕ್ಟರ್ ಅರಣ್ಯ ಪ್ರದೇಶ ಮತ್ತು ಉದ್ರಿ ಗ್ರಾಮದ ಸರ್ವೇ ನಂಬರ್ 103ರಲ್ಲಿ 1.204038ಹೆಕ್ಟರ್ ಅರಣ್ಯ ಪ್ರದೇಶದಲ್ಲಿ ಅರಣ್ಯ ಒತ್ತುವರಿಯು ಇರುವ ಕಾರಣ ಸದರಿ ಒತ್ತುವರಿ ಪ್ರದೇಶದ ಸಕಮಾತಿಗೆ ಸಂಬಂಧಿಸಿದಂತೆ ಅರಣ್ಯ ಹಕ್ಕು ಕಾಯ್ದೆಯಡಿ 384 ಅರ್ಜಿಗಳು ಸಂಬಂಧಿಸಿದ ಪ್ರಾಧಿಕಾರಕ್ಕೆ ಸ್ವೀಕೃತವಾಗಿರುತ್ತದೆ. ಆದರೆ ಈ 384 ಅರ್ಜಿಗಳನ್ನು ಪರಿಶೀಲಿಸಿದ ಉಪ ವಿಭಾಗ ಮಟ್ಟದ ಅರಣ್ಯ ಹಕ್ಕು ಸಮಿತಿ, ಫಲಾನುಭವಿಗಳ ಅರ್ಜಿಗಳಲ್ಲಿಯ ದಾಖಲಾತಿಗಳ ಕೊರತೆಯಿಂದ ಸದರಿ 384 ಅರ್ಜಿಗಳನ್ನು ತಿರಸ್ಕರಿಸಿ, ಮೇಲ್ಮನವಿ ಸಲ್ಲಿಸಲು 90ದಿನಗಳ ಕಾಲಾವಕಾಶನೀಡಲಾಗಿರುತ್ತದೆ. ನಿಗದಿತ ಸಮಯದಲ್ಲಿ ಅರ್ಜಿದಾರರು ಮೇಲ್ಮನವಿಯನ್ನು ಸಲ್ಲಿಸದ ಕಾರಣ 384 ಅರ್ಜಿಗಳ ವಜಾ ಮಾಡಲಾಗಿರುತ್ತದೆ. ಆದ ಕಾರಣ ಜಿಲ್ಲಾಧಿಕಾರಿಗಳು ಅರಣ್ಯ ಹಕ್ಕು ಪ್ರಮಾಣಪತ್ರವನ್ನು ನೀಡಿರುತ್ತಾರೆ.
- ಶಿರಾಳಕೊಪ್ಪ ವಲಯದ ಅರಣ್ಯ ಅಧಿಕಾರಿಯವರೊಂದಿಗೆ ಉದ್ದೇಶಿತ ಮಾರ್ಗದ ಸ್ಥಳ ಪರಿಶೀಲನೆ ಮಾಡಿ ಅರಣ್ಯ ಭೂಮಿ ನಷ್ಟ ಕಡಿಮೆ ಮಾಡಲು ಪರ್ಯಾಯ ಮಾರ್ಗದ ಬಗ್ಗೆ ಪರಿಶೀಲಿಸಲಾಗಿ, ಸದರಿ ಪ್ರಸ್ತಾವಿತ ಮಾರ್ಗದ ಪಥದ ಸಮೀಪದಲ್ಲಿ ಯಾವುದೇ 33/66/110ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳು ಇರುವುದಿಲ್ಲ. ಆದ್ದರಿಂದ ವಿದ್ಯುತ್ ಪ್ರಸರಣ ಮಾರ್ಗದ ಉನ್ನತೀಕರಣಕ್ಕೆ ಅವಕಾಶವಿರುವುದಿಲ್ಲ. ಸದರಿ ರೂಟ್-2 ಮಾರ್ಗವೇ ಅತೀ ಕಡಿಮೆ ಅರಣ್ಯ ಭೂಮಿ ನಷ್ಟ ಹಾಗೂ ಕಡಿಮೆ ಮರಗಳ ಕಡಿತ ಮಾಡುವ ಪಥವಾಗಿರುತ್ತದೆ ಎಂದು ನಿರ್ಧರಿಸಲಾಗಿರುತ್ತದೆ.

ಆದ್ದರಿಂದ ಪ್ರಸ್ತಾಪಿತ 110ಕೆ.ವಿ ಮಾರ್ಗದ ಪಥವು 700 ಮೀಟರ್ ನಷ್ಟು ಕುರುಚಲು ಅರಣ್ಯ ಪ್ರದೇಶವಿದ್ದು ಅತೀ ಕಡಿಮೆ ಅರಣ್ಯ ಭೂಮಿ ನಷ್ಟ ಹಾಗೂ ಕಡಿಮೆ ಮರಗಳ ಕಡಿತಲೆ ಮಾಡುವ ಪಥವಾಗಿರುತ್ತದೆ. ಉಳಿದ 2060ಮೀಟರ್ ನಷ್ಟು ಮಾರ್ಗವು ಅರಣ್ಯ ಒತ್ತುವರಿ ಪ್ರದೇಶವಾಗಿರುತ್ತದೆ. ಸದರಿ 110 ಕೆವಿ ಮಾರ್ಗದ ಪಥಕ್ಕೆ ಎಫ್.ಆರ್.ಎ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದಿರುವುದರಿಂದ ಈ ಹಿಂದೆ ಉದ್ದೇಶಿಸಿದ ರೂಟ್-2 ಮಾರ್ಗದ ಪಥವೇ ಸೂಕ್ತವಾಗಿರುವುದರಿಂದ ಸದರಿ ರೂಟ್-2 ಮಾರ್ಗಕ್ಕೆ ಅನುಮತಿ ನೀಡಬೇಕೆಂದು ಎಫ್.ಆರ್.ಎ ಪ್ರಮಾಣ ಪತ್ರದ ಮೂಲ ಪ್ರತಿಯೊಂದಿಗೆ ಕೋರಿರುತ್ತಾರೆ.

ಮೇಲ್ಕಂಡ ಉಪಯೋಗಿ ಸಂಸ್ಥೆಯ ಕೋರಿಕೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಲಾಗಿ ಉಪಯೋಗಿ ಸಂಂಸ್ಥೆಯು ವಿವರಿಸಿರುವ ಮಾಹಿತಿಯು ನೈಜವಾಗಿರುತ್ತದೆ. ಅಲ್ಲದೆ. ಪ್ರಸ್ತಾಪಿತ 110ಕೆ.ವಿ ಮಾರ್ಗದ ಪಥವು 700 ಮೀಟರ್ ನಷ್ಟು ಕುರುಚಲು ಅರಣ್ಯ ಪ್ರದೇಶವಿದ್ದು ಅತೀ ಕಡಿಮೆ ಅರಣ್ಯ ಭೂಮಿ ನಷ್ಟ ಹಾಗೂ ಕಡಿಮೆ ಮರಗಳ ಕಡಿತಲೆ ಮಾಡುವ ಪಥವಾಗಿರುತ್ತದೆ. ಉಳಿದ 2060ಮೀಟರ್ ನಷ್ಟು ಮಾರ್ಗವು ಅರಣ್ಯ ಒತ್ತುವರಿ ಪ್ರದೇಶವಾಗಿರುತ್ತದೆ. ಈ ಒತ್ತುವರಿ ಭೂಮಿಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯು ಎಫ್.ಆರ್.ಎ ಪ್ರಮಾಣ ಪತ್ರವನ್ನು ಪಡೆದಿರುವ ಕಾರಣ ಈ ಹಿಂದೆ ಉದ್ದೇಶಿಸಿದ ರೂಟ್-2 ಮಾರ್ಗದ ಪಥವೇ ಸೂಕ್ತವಾಗಿರುವುದರಿಂದ ಸದರಿ ರೂಟ್-2 ಮಾರ್ಗಕ್ಕೆ ಅನುಮತಿ ನೀಡಬಹುದಾಗಿರುತ್ತದೆ. ಎಂಬ ಅಭಿಪ್ರಾಯವನ್ನು ನೀಡುತ್ತಾ, ಈ ಯೋಜನೆಗೆ ಸಂಬಂಧಿಸಿದಂತೆ ಸದರಿ ರೂಟ್-2 ಮಾರ್ಗದ ಪಥವೇ ಸೂಕ್ತವಾಗಿದೆ ಎಂದು ಉಲ್ಲೇಖ (4)ರ ಪತ್ರದಲ್ಲಿ ಪರ್ಯಾಯ ಮಾರ್ಗವಾದ ರೂಟ್-1 &3ರ ನಕಾಶೆ ಮತ್ತು ಇತರೆ ದಾಖಲಾತಿಯೊಂದಿಗೆ ವರದಿಯನ್ನು ತಮ್ಮ ಕಛೇರಿಗೆ ಸಲ್ಲಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತಾ. ಈ ಪತ್ರದೊಂದಿಗೆ ಉಪಯೋಗಿ ಸಂಸ್ಥೆಯು ಸಲ್ಲಿಸಿರುವ ಎಫ್.ಆರ್.ಎ ಪ್ರಮಾಣ ಪತ್ರ ಹಾಗೂ ಉಲ್ಲೇಖ (5)ರ ಪತ್ರದ ನಕಲನ್ನು (ನಾಲ್ಕು ಪ್ರತಿಗಳಲ್ಲಿ) ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ.

ತಮ್ಮ ನಂಬುಗೇಯ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Phone & Fax: 08182-272672

E-mail : eemwdsmg@gmail.com

ಕಾರ್ಯನಿರ್ವಹಕ ಇಂಜಿನಿಯರ್(ವಿ)
ರವರ ಕಛೇರಿ
ಬೃ,ಕಾ,,ವಿ-1ಕವಿಪ್ರನಿನಿ, ಬಾಲರಾಜ್ ಅರಸ್ ರಸ್ತೆ
ರೈಲ್ವೇ ಸ್ಟೇಷನ್ ಹತ್ತಿರ ಶಿವಮೊಗ್ಗ.

ಕ್ರ.ಸಂ. ಕಾನಿಇಂ(ವಿ)/ಸಕಾನಿಇಂ(ಕ)/ಬೃಕಾಉವಿ-1/ಶಿ/2021-22/299-305 ದಿನಾಂಕ- 15.02.2022

ಲಗತ್ತು:- ಮೂಲ ಎಫ್.ಆರ್.ಎ. ಪ್ರಮಾಣ ಪತ್ರ.

ಗೆ,
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಸಾಗರ ವಿಭಾಗ,
ಸಾಗರ.

ಮಾನ್ಯರೇ,

ವಿಷಯ:- ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸರ್ವೆ ನಂ.316 ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 110ಕೆವಿ ಪ್ರಸರಣ ಮಾರ್ಗ ಮತ್ತು 1x10MVA, 110/11ಕೆವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡುವ ಅರಣ್ಯ ಪ್ರದೇಶದ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:- 1) ಅರಣ್ಯ ಪ್ರದೇಶದ ಪ್ರಸ್ತಾಪ ಸಂಖ್ಯೆ:-FP/KA/TRANS/38778/2019

2) ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ ರವರ ಸಂಖ್ಯೆ: LND(2)MISC/150/2019 (E-5968) ದಿ: 07.12.2020

3) ತಮ್ಮ ಕಛೇರಿ ಪತ್ರ ಸಂಖ್ಯೆ: ಬಿ1/ಭೂಮಿ/ಎಫ್.ಸಿ/ಜಿ.ಎಲ್-1190/2019-20/3689 ದಿ: 24.03.2021

4) ಈ ಕಛೇರಿ ಪತ್ರ ಸಂಖ್ಯೆ: 936-41 ದಿ: 10.06.2021

5) ತಮ್ಮ ಕಛೇರಿ ಪತ್ರ ಸಂಖ್ಯೆ: ಬಿ1/ಭೂಮಿ/ಎಫ್.ಸಿ/ಜಿ.ಎಲ್/38788/2019-20 ದಿ: 21.08.2021

6) ಈ ಕಛೇರಿ ಪತ್ರ ಸಂಖ್ಯೆ: 4274-83 ದಿ: 23.12.2021

7) ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರ ಕಛೇರಿ ಪತ್ರ ಸಂಖ್ಯೆ: 06/27.12.2021

8) ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಸೊರಬ ರವರ ಕಛೇರಿ ಪತ್ರ ಸಂಖ್ಯೆ: 33/07.01.2022

9) ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರ ಕಛೇರಿ ಪತ್ರ ಸಂಖ್ಯೆ: 06/11.01.2021

10) ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ, ಶಿವಮೊಗ್ಗ ಜಿಲ್ಲೆ ರವರ ಎಫ್.ಆರ್.ಎ ಪ್ರಮಾಣ ಪತ್ರ ಸಂಖ್ಯೆ: SMGDC-LND(2)MISE/150/2019(5968) Dtd: 14.02.2022

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ
ಸಾಗರ ವಿಭಾಗ, ಸಾಗರ
17 FEB 2022
ಶಾಖೆ 201 ಕ್ರ.ಸಂ. 6247
ಪ.ಸ್ವ ಉ.ಅ.ಸಂ

** ** **

ಮೇಲ್ಕಂಡ ವಿಷಯ ಮತ್ತು ಉಲ್ಲೇಖಗಳಿಗೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು, ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸರ್ವೆ ನಂ.316 ರಲ್ಲಿ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ 1x10MVA, 110/11ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕವನ್ನು ಕಲ್ಪಿಸಲು ಹಾಲಿ ಇರುವ 110/11ಕೆವಿ ತೋಗರ್ಸಿ ವಿದ್ಯುತ್ ಉಪ ಕೇಂದ್ರದಿಂದ 110ಕೆವಿ ವಿದ್ಯುತ್ ಮಾರ್ಗವು ಕನಕೊಪ್ಪ, ಚಿಕ್ಕಬ್ಬೂರ್, ಗುಡುಗಿನಕೊಪ್ಪ, ಬಿದರಗೆರೆ, ಕುಮ್ರಿ ಗ್ರಾಮಗಳ ಸರಹದ್ದಿನ ಮುಖಾಂತರ ಹಾದು ಹೋಗಿ ಉದ್ದೇಶಿತ ಕುಪ್ಪಗಡ್ಡೆ 1x10MVA, 110/11 ಕೆವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕಿಸಲು ಉದ್ದೇಶಿಸಿದೆ.

ಉದ್ರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅರಣ್ಯ ಹಕ್ಕು ಸಮಿತಿಗಳಲ್ಲಿ ಗುಡುಗಿನ ಕೊಪ್ಪ ಸ.ನಂ. 40 ಕ್ಕೆ ಯಾವುದೇ ಅರ್ಜಿಗಳು ಸಲ್ಲಿಸಿರುವುದಿಲ್ಲಾ ಹಾಗೂ ಉದ್ರಿ ಗಾಮ ಸ.ನಂ. 164 ಹಾಗೂ 103 ರಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಒಟ್ಟು 384 ಫಲಾನುಭವಿಗಳಿಂದ ಅರ್ಜಿಗಳು ಉಪವಿಭಾಗ ಮಟ್ಟದ ಸಮಿತಿಯಲ್ಲಿ ಇನ್ನೂ ಇತ್ಯರ್ಥವಾಗಲು ಬಾಕಿ ಇರುವುದರಿಂದ, ಸದರಿ ಪ್ರಸ್ತಾವನೆಯಲ್ಲಿ FRA Cerificate ನೀಡಲು ಅವಕಾಶವಿರುವುದಿಲ್ಲಾ ಎಂದು ಉಲ್ಲೇಖ 2 ರಲ್ಲಿ ಈ ಕಛೇರಿಗೆ ತಿಳಿಸಲಾಗಿರುತ್ತದೆ.

ಮುಂದುವರಿದು, ಉದ್ದೇಶಿತ ಕಾಮಗಾರಿಗೆ 11.648 ಕಿ.ಮೀ ಉದ್ದದ ಸಂಪರ್ಕ ಕಲ್ಪಿಸುವ 110 ಕೆವಿ ಮಾರ್ಗದ ಯೋಜನೆಯ ಬಗ್ಗೆ ಪ್ರಸ್ತಾಪಿತ ಪ್ರದೇಶದ Present status of settlement of rights, status of FRA compliance. NOCs from claimant in case of claim being already settled in their favor rtc. Further it is also requested to examine on the feasibility of up gradation of existing lines so that diversion of forest land can be avoided/minimized ಎಂದು ತಿಳಿಸಿ ಹಾಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲಿಸಿ ವಿವರವಾದ ವರದಿಯನ್ನು ತುರ್ತಾಗಿ ಸಲ್ಲಿಸಲು ಮತ್ತು

ಪ್ರಸ್ತಾಪಿತ ಸ್ಥಳದಲ್ಲಿ ತಮ್ಮಲ್ಲಿರುವ ಅರಣ್ಯ ಹಕ್ಕು ಸಮಿತಿ ಕಡತದೊಂದಿಗೆ ಪರಿಶೀಲಿಸಿ, ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕರು (ಗ್ರೇಡ್-2) ಸಮಾಜ ಕಲ್ಯಾಣ ಇಲಾಖೆ ಸಾಗರ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಶಿವಮೊಗ್ಗ ಇವರೊಂದಿಗೆ ಸಮನ್ವಯ ಸಾಧಿಸಿ ವರದಿ ನೀಡಲು ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ರವರಿಗೆ ಸೂಚಿಸಿದ್ದು ಪತ್ರವನ್ನು ಈ ಕಛೇರಿಗೆ ಪತ್ರಿಸಿರುತ್ತೀರಿ.

ಉಲ್ಲೇಖ ಪತ್ರ 3 ರಲ್ಲಿ ಈ ಕಚೇರಿಯಿಂದ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ ರವರಿಗೆ ಕೈಗೊಂಡ ಕ್ರಮಗಳ ಮಾಹಿತಿಯನ್ನು ಕೋರಲಾಗಿತ್ತು. ತಮ್ಮ ಕಚೇರಿಯಿಂದ ಈ ಕಚೇರಿಗೆ ಉಲ್ಲೇಖ ಪತ್ರ 4 ರಲ್ಲಿ ವಲಯ ಅರಣ್ಯಾಧಿಕಾರಿ, ಶಿರಾಳಕೊಪ್ಪ ವಲಯ, ಶಿರಾಳಕೊಪ್ಪ, ಸಹಾಯಕ ನಿರ್ದೇಶಕರು (ಗ್ರೇಡ್-2) ಸಮಾಜ ಕಲ್ಯಾಣ ಇಲಾಖೆ ಸಾಗರ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಶಿವಮೊಗ್ಗ ಇವರೊಂದಿಗೆ ಸಮನ್ವಯ ಸಾಧಿಸಿ ವಿವರವಾದ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತೀರಿ.

ದಿ: 15.09.2021 ರಂದು ಉದ್ರಿ ಅರಣ್ಯರಕ್ಷಣಾಧಿಕಾರಿ ರವರೊಂದಿಗೆ ಈ ಕಛೇರಿಯ ಅಧಿಕಾರಿಗಳು ಉದ್ದೇಶಿತ ಮಾರ್ಗದ ಸ್ಥಳ ಪರಿಶೀಲನೆ ಮಾಡಿ ಅರಣ್ಯ ಭೂಮಿ ನಷ್ಟ ಕಡಿಮೆ ಮಾಡಲು ಪರ್ಯಾಯ ಮಾರ್ಗದ ಬಗ್ಗೆ ಪರಿಶೀಲಿಸಲಾಗಿ, ಸದರಿ ಪ್ರದೇಶದ ಸಮೀಪದಲ್ಲಿ ಯಾವುದೇ 33/66/110 ಕೆವಿ ವಿದ್ಯುತ್ ಪ್ರಸರಣ ಮಾರ್ಗಗಳು ಇರುವುದಿಲ್ಲ. ಆದುದ್ದರಿಂದ, ವಿದ್ಯುತ್ ಪ್ರಸರಣ ಮಾರ್ಗಗಳ ಉನ್ನತೀಕರಣಕ್ಕೆ ಅವಕಾಶವಿರುವುದಿಲ್ಲ. ಸದರಿ ಪ್ರಸ್ತಾವಿತ ಮಾರ್ಗದ ಪಥವು ಅತೀ ಕಡಿಮೆ ಅರಣ್ಯ ಭೂಮಿ ನಷ್ಟ ಹಾಗೂ ಕಡಿಮೆ ಮರಗಳ ಕಡಿತ ಮಾಡುವ ಪಥವಾಗಿರುತ್ತದೆ ಎಂದು ನಿರ್ಧರಿಸಲಾಗಿ ಹಾಗೂ ಪರ್ಯಾಯ ಮಾರ್ಗಗಳ ಬಗ್ಗೆ ವಲಯ ಅರಣ್ಯಾಧಿಕಾರಿಗಳಯ, ಶಿರಾಳಕೊಪ್ಪ ವಲಯ ರವರು ವಿವರವಾದ ವರದಿಯನ್ನು ಸಲ್ಲಿಸಿರುತ್ತಾರೆ. ಈ ಹಿಂದೆ ಉದ್ದೇಶಿತ ಪಥಕ್ಕೆ FRA Certificate ಅನ್ನು ಸಂಭಂಧಿಸಿದ ಪ್ರಾಧಿಕಾರದಿಂದ ಪಡೆಯುವ ಪ್ರಯತ್ನ ಮಾಡಲು ನಿರ್ಧರಿಸಲಾಯಿತು.

ಉದ್ರಿ ಗ್ರಾಮ ಸ.ನಂ. 164 ಹಾಗೂ 103 ರಲ್ಲಿ ಅರಣ್ಯ ಹಕ್ಕು ಕಾಯ್ದೆಯಡಿ ಬಾಕಿ ಇದ್ದ ಒಟ್ಟು 384 ಫಲಾನುಭವಿಗಳ ಅರ್ಜಿಗಳನ್ನು ದಾಖಲಾತಿಗಳ ಕೊರತೆಯಿಂದ ತಿರಸ್ಕರಿಸಿ, ಮೇಲ್ಮನವಿ ಸಲ್ಲಿಸಲು 90ದಿನಗಳ ಕಾಲಾವಕಾಶ ನೀಡಲಾಗಿರುತ್ತದೆ ಎಂದು ಸಮಾಜ ಕಲ್ಯಾಣ ಅಧಿಕಾರಿಗಳು ಸೊರಬರವರು ತಿಳಿಸಿರುತ್ತಾರೆ. ದಿ: 21.12.2021 ರಂದು ಸೊರಬ ಸಮಾಜ ಕಲ್ಯಾಣ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸಿ ಮೇಲ್ಮನವಿ ಸಲ್ಲಿಸಿರುವ ಅರ್ಜಿಗಳ ಮಾಹಿತಿ ಕೋರಲಾಗಿ, ಯಾವುದೇ ಮೇಲ್ಮನವಿಗಳು ಸಲ್ಲಿಕೆಯಾಗಿರುವುದಿಲ್ಲಾ ಎಂದು ತಿಳಿಸಿರುತ್ತಾರೆ. ಅರಣ್ಯ ಹಕ್ಕು ಕಾಯ್ದೆಯಡಿ ಸ.ನಂ. 164 ಹಾಗೂ 103 ರಲ್ಲಿ ಬಾಕಿ ಇಲ್ಲದೇ ಇರುವುರಿಂದ ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರಿಗೆ **"FRA Cerificate"** ಅನ್ನು ನೀಡುವ ವ್ಯವಸ್ಥೆ ಮಾಡಿಸಿಕೊಡಬೇಕಾಗಿ ಮತ್ತೊಮ್ಮೆ ಕೋರಲಾಗಿತ್ತು. ಈ ಕಚೇರಿಯ ಪ್ರಸ್ತಾವನೆಯನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರಿಗೆ ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿರುತ್ತಾರೆ.

ಸದರಿ ಪಸ್ತಾವನೆಯನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರು ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಸೊರಬ ರವರಿಗೆ ಎಫ್.ಆರ್.ಎ ಪ್ರಮಾಣ ಪತ್ರ ನೀಡುವ ಸಲುವಾಗಿ ವರದಿ ನೀಡುವಂತೆ ಉಲ್ಲೇಖ 7 ರಲ್ಲಿ ಸೂಚಿಸಿರುತ್ತಾರೆ. ಈ ಕಛೇರಿಯ ಅಧಿಕಾರಿಗಳು ದಿ: 05.01.2021 ರಂದು ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಸೊರಬ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳೊಂದಿಗೆ ಎಫ್.ಆರ್.ಎ ಪ್ರಮಾಣ ಪತ್ರ ನೀಡುವ ಸಂಬಂಧ ಸ್ಥಳ ಪರಿಶೀಲಿಸಿಲಾಗಿದೆ.

ಉಲ್ಲೇಖ 8 ರಲ್ಲಿ ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಸೊರಬ ರವರು ಎಫ್.ಆರ್.ಎ ಪ್ರಮಾಣ ಪತ್ರ ನೀಡುವ ಸಂಬಂಧ ವರದಿಯನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರಿಗೆ ಸಲ್ಲಿಸಿರುತ್ತಾರೆ.

ಉಲ್ಲೇಖ 9 ರಲ್ಲಿ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ, ಪರಿಶಿಷ್ಟ ವರ್ಗಗಳ ಕಾಲ್ಯಾಣ ಇಲಾಖೆ, ಶಿವಮೊಗ್ಗ ರವರು ಬೃಹತ್ ಕಾಮಗಾರಿ ವಿಭಾಗದಿಂದ 110ಕೆವಿ ಪ್ರಸರಣ ಮಾರ್ಗ ಮತ್ತು 110/11ಕೆವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡುವ ಅರಣ್ಯ ಪ್ರದೇಶಕ್ಕೆ ಎಫ್.ಆರ್.ಎ ಪ್ರಮಾಣ ಪತ್ರ ನೀಡಬಹುದಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ರವರಿಗೆ ವವರಿಯನ್ನು ಸಲ್ಲಿಸಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ ಎಫ್.ಆರ್.ಎ ಪ್ರಮಾಣ ಪತ್ರವನ್ನು ಉಲ್ಲೇಖ 10ರಲ್ಲಿ ನೀಡಿರುತ್ತಾರೆ (ಎಫ್.ಆರ್.ಎ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ.)

ಪ್ರಸ್ತಾವಿತ 110ಕೆವಿ ಮಾರ್ಗದ ಪಥವು 700ಮೀ ನಷ್ಟು ಕರುಚಲು ಅರಣ್ಯ ಪ್ರದೇಶವಿದ್ದು, ಅತೀ ಕಡಿಮೆ ಅರಣ್ಯ ಭೂಮಿ ನಷ್ಟ ಹಾಗೂ ಕಡಿಮೆ ಮರಗಳ ಕಡಿತ ಮಾಡುವ ಪಥವಾಗಿರುತ್ತದೆ, ಉಳಿದ 2060 ಮೀ ನಷ್ಟು ಮಾರ್ಗವು ಅರಣ್ಯ ಒತ್ತುವರಿ ಪ್ರದೇಶವಾಗಿರುತ್ತದೆ ಹಾಗೂ ಸದರಿ 110ಕೆವಿ ಮಾರ್ಗದ ಪಥಕ್ಕೆ ಎಫ್.ಆರ್.ಎ ಪ್ರಮಾಣ ಪತ್ರವನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆದಿರುವುದರಿಂದ, ಈ ಹಿಂದೆ ಉದ್ದೇಶಿಸಿದ್ದ 110ಕೆವಿ ಮಾರ್ಗದ ಪಥವೇ ಸೂಕ್ತವೆಂದು ತಿಳಿಸುತ್ತಾ ಹಾಗೂ ಸದರಿ ಪಥಕ್ಕೆ ಅನುಮತಿ ನೀಡಬೇಕೆಂದು ತಮ್ಮಲ್ಲಿ ಕೋರಲಾಗಿದೆ.

ತಮ್ಮ ವಿಶ್ವಾಸಿ

ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಬೃ.ಕಾ.ವಿ. ಕ.ವಿ.ಪ್ರ.ನಿ.ನಿ, ಶಿವಮೊಗ್ಗ.

**FORM-1**

(for liner projects)

Government of Karnataka

**Office of The Deputy Commissioner, Shivamogga District.**

No. SMGDC-LND(2]MISE/150/2019(5968) Dated: 14.2.2022

**TO WHOM SO EVER IT MAY CONCERN**

In ·compliance of the Ministry of Environment and Forest (MoEF), Government of India's letter No. 11-9/98-FC (pt.) dated 3rd August 2009 where in the MoEF issued guidelines on submission of evidences for having initiated and completed the process of settlement of rights under the scheduled Tribes and other Traditional Forest Dwellers (Recognition of Forest Rights) Act, 2006 (FRA, for short) on the forest land proposed to be diverted for non-forest purposes read with MoEF's letter dated 5th February 2013 wherein MoEF issued certain relaxation in respect of linear projects, it is certified that 6.073276 (15.0074 Acre) hectares of forest land proposed to be diverted in favour of Executive Engineer, Major Works, KPTCL, Shivamogga-577201 (name of user agency) for Construction of the proposed 110kV S/C line of D/C towers from existing 110/11kV Substation at Togarsi to the proposed 110/11kV Sub-station at Kuppagadde in Soraba taluk, (purpose for diversion of forest land) in Shivamogga district falls within jurisdiction of Udri village(s) in Soraba tehsils.

It is further certified that

a) The complete process for identification and settlement of rights under the FRA has been carried out for the entire (Soraba Taluk, Udri Villege, Survey Number 40, 103 & 164, 6.073276 (15.0074 Acre) hectares of forest area proposed for diversion. The certified Letter from Assistant Director, District Scheduled Tribes Welfare Officer, Scheduled Tribes Welfare Department, Shivamogga is enclosed as annexure-I. Since there are no applications for claiming the rights, the question of placing before the sub Division level committee and District level committee does not arise. Hence, annexure-II and annexure-III are not enclosed as they are not applicable.
b) The diversion of forest land for facilities managed by the government as required under section 3(2) of the FRA have been completed and the Grama Sabhas have given their consent to it.
c) The proposal does not involve recognized rights of Primitive Tribal Groups and Pre-agricultural communities.

Encl: As above

( Dr.Selvamani R)

DEPUTY COMMISSIONER,SHIVAMOGGA Dist.,

KARNATAKA STATE

(Full name and office seal of the District Collector)

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

Office of the Deputy Conservator of Forests, Sagar Forest Division, Sagar– 577401

Phone No. : 08183 226071 Email: : Sagardcf@rediffmail.com

ಕ್ರ: ಬಿ1/ಭೂಮಿ/ಎಫ್.ಸಿ/ಜಿ.ಎಲ್–1190/2019–20 ದಿ: 06-10-2020

9 OCT 2020

ಗೆ,

ಅರಣ್ಯ ಸಂರಕ್ಷಣಾಧಿಕಾರಿಗಳು
ಶಿವಮೊಗ್ಗ ವೃತ್ತ ಶಿವಮೊಗ್ಗ

**Proposal No. FP/KA/TRANS/38788/2019**

ವಿಷಯ:– ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸ.ನಂ.316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 110ಕೆ.ವಿ ಪ್ರಸರಣ ಮಾರ್ಗ ಮತ್ತು 1x10MVA, 110/11 ಕೆ.ವಿ ವಿದ್ಯುತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು 110 ಕೆ.ವಿ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಪರ್ಯಾಯ ಮಾರ್ಗವನ್ನು ಗುರುತಿಸಿರುವ ಪ್ರದೇಶದ ಮಾಹಿತಿಯ ನೈಜತೆ ಹಾಗೂ ಸ್ಥಳ ಮಹಜರ್ ವರದಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:–
1. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ) ಬೆಂಗಳೂರು ಇವರ ಕಛೇರಿ ಪತ್ರ ಸಂಖ್ಯೆ: Old file No :A5(3).GFL/CR-3/2018-19, e-Office file No: KFD/HOFF/A5-3(GFL)/13/2018-FC-KFD Dt:-14.17.2020
2. ಈ ಕಛೇರಿ ಸಮ ಪತ್ರದ ದಿನಾಂಕ 28.07.202020
3. ವಲಯ ಅರಣ್ಯಾಧಿಕಾರಿ ಶಿಕಾರಳಕೊಪ್ಪ ವಲಯ ಶಿರಾಳಕೊಪ್ಪ ಇವರ ಕಛೇರಿ ಪತ್ರ ಸಂಖ್ಯೆ : 273/2020–21 ದಿನಾಂಕ 21.09.2020
4. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿಕಾರಿಪುರ ಉಪ ವಿಭಾಗ ಶಿಕಾರಿಪುರ ಇವರ ಕಛೇರಿ ಪತ್ರ ಸಂಖ್ಯೆ :383/20–21 ದಿನಾಂಕ 29.09.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸ.ನಂ 316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 1x10MVA, 110/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ನಿರ್ಮಾಣ ಮಾಡಲು 110 ಕೆವಿ ಮಾರ್ಗವು ತೊಗರ್ಸಿ ವಿದ್ಯುತ್ ಉಪ ಕೇಂದ್ರದಿಂದ ಜೋಡಣೆಯಾಗಿ ಕಾನಕೊಪ್ಪ, ಚಿಕ್ಕಬ್ಬೂರು, ಗುಡುಗಿನಕೊಪ್ಪ, ಬಿದರಗೆರೆ ಹಾಗೂ ಕುಮ್ರಿ ಗ್ರಾಮಗಳ ಸರಹದ್ದಿನ ಮುಖಾಂತರ ಹಾದು ಹೋಗಿ ಉದ್ದೇಶಿತ ಕುಪ್ಪಗಡ್ಡೆ 1x10MVA, 110/11 ಕೆ.ವಿ ವಿದ್ಯುತ್ ಉಪ ಕೇಂದ್ರಕ್ಕೆ ಸಂಪರ್ಕಿಸಲು ಉದ್ದೇಶಿತ ಪ್ರದೇಶದಲ್ಲಿ ಪ್ರಸ್ತುತ ಕಾಮಗಾರಿಗೆ 11.648 ಕಿ.ಮೀ ಉದ್ದದ ಸಂಪರ್ಕ ಕಲ್ಪಿಸುವ 110 ಕೆವಿ ಮಾರ್ಗವನ್ನು 22 ಮೀ ಅಗಲ ಅನ್ವಯಿಸುವಂತೆ ಒಟ್ಟು 6.073 ಹೆಕ್ಟರ್ ಅರಣ್ಯ ಭೂಮಿಯನ್ನು ಕಾಮಗಾರಿಗೆ ಬಿಡುಗಡೆಗೊಳಿಸುವ ಸಂಬಂಧ ಉಪಯೋಗಿ ಸಂಸ್ಥೆಯವರು ಪಾರೆಸ್ಟ ಕ್ಲಿಯರೆನ್ಸಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿರುತ್ತಾರೆ. ಉಲ್ಲೇಖ (1)ರಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ) ಬೆಂಗಳೂರು ಇವರು ಘನ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಅಪಜೀ 44 ಎಫ್.ಎ.ಎಫ್ 2020 (ಇ) ದಿನಾಂಕ 12.06.2020ರನ್ನು ಉಲ್ಲೇಖಿಸಿ ***"ಸದರಿ ಯೋಜನೆಯಲ್ಲಿ ಪ್ರಸ್ತಾಪಿತ ಮಾರ್ಗಕ್ಕೆ ಪರ್ಯಾಯವಾಗಿ ಬೇರೆ ಮಾರ್ಗಗಳನ್ನು ಅನ್ವೇಷಿಸಿರುವ ಉಪಯೋಗಿ ಸಂಸ್ಥೆಯು ಒದಗಿಸಿರುವ ನಕ್ಷೆಯಲ್ಲಿ ಸಂಬಂಧಿಸಿದ ಅರಣ್ಯ ಅಧಿಕಾರಿಗಳ ಸಹಿ ಮತ್ತು ಮೊಹರು ಒಳಗೊಂಡಂತೆ , ಈ ಸಂಬಂಧ ಉಪಯೋಗಿ ಸಂಸ್ಥೆಯು ಒದಗಿಸಿರುವ ಮಾಹಿತಿಯ ನೈಜತೆಯ ಬಗ್ಗೆ ಸ್ಥಳ ಮಹಜರ್ ನಡೆಸಿ ವರದಿಯನ್ನು ಸಲ್ಲಿಸಲು"*** ಸೂಚಿಸಿರುತ್ತಾರೆ.

ಮುಂದುವರೆದು ಉಲ್ಲೇಖ(1)ರ ನಿರ್ದೇಶನದ ಅನುಸಾರ ಪ್ರಸ್ತಾಪಿತ ಯೋಜನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಯವರು ಪರ್ಯಾಯವಾಗಿ ಗುರುತಿಸಿರುವ ಮಾರ್ಗಗಳ ಬಗ್ಗೆ ಸ್ಥಳ ಪರಿಶೀಲಿಸಿ ಮಹಜರ ಕ್ರಮ ಜರುಗಿಸಿ ಸ್ಪಷ್ಟ ವರದಿಯನ್ನು ಸಲ್ಲಿಸಲು ಉಲ್ಲೇಖ (2)ರಲ್ಲಿ ವಲಯ ಅರಣ್ಯಾಧಿಕಾರಿ ಶಿರಾಳಕೊಪ್ಪ

ವಲಯ ಶಿರಾಳಕೊಪ್ಪ ಇವರಿಗೆ ಸೂಚಿಸಿದಂತೆ ಸಂಬಂದ ಪಟ್ಟ ಶಾಖೆಯ ಉಪ ವಲಯ ಅರಣ್ಯಾಧಿಕಾರಿ, ಮತ್ತು ವಲಯ ಅರಣ್ಯಾಧಿಕಾರಿ ಶಿರಾಳಕೊಪ್ಪ ಹಾಗೂ ಉಪಯೋಗಿ ಸಂಸ್ಥೆಯ ಸಹಾಯಕ ಅಭಿಯಂತರರು ಜೊತೆಗೂಡಿ ಪರ್ಯಾಯ ವಾರ್ಗದ ಸ್ಥಳ ಮಹಜರನ್ನು ಜರುಗಿಸಿ ವಿವರವಾದ ವರದಿಯೊಂದಿಗೆ ಮತ್ತು ಪರ್ಯಾಯ ಮಾರ್ಗವನ್ನು ಗುರುತಿಸಿರುವ ಗ್ರಾಮ ನಕಾಶೆ ಹಾಗೂ ಟೋಪೋ ನಕಾಶೆಗೆ ಅರಣ್ಯಾಧಿಕಾರಿಗಳ ಸಹಿಯೊಂದಿಗೆ ಉಲ್ಲೇಖ (3)ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಶಿಕಾರಿಪುರ ಉಪ ವಿಭಾಗ ಇವರ ಮುಖಾಂತರ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಮುಂದುವರೆದು ಉಲ್ಲೇಖ (2)ರ ವಲಯ ಅರಣ್ಯಾಧಿಕಾರಿ ಶಿರಾಳಕೊಪ್ಪ ಇವರ ಸ್ಥಳ ಮಹಜರ್ ಹಾಗೂ ವರದಿಯ ಅನುಸಾರ ಉಪಯೋಗಿ ಸಂಸ್ಥೆಯು ಸದರಿ ಯೋಜನೆಗೆ ಸಂಬಂಧಿಸಿದಂತೆ ಗುರುತಿಸಿರುವ ಮೂರು ಮಾರ್ಗಗಳಲ್ಲಿ ರೂಟ್-1 ಮತ್ತು ರೂಟ್-3ರಲ್ಲಿ ದಟ್ಟವಾದ ಅರಣ್ಯ ಪ್ರದೇಶ ಹಾಗೂ ಸಣ್ಣ ಪುಟ್ಟ ಗುಡ್ಡಗಳು ಇರುತ್ತದೆ. ಸದರಿ ಗುಡ್ಡ ಪ್ರದೇಶಗಳಲ್ಲಿ ವಿದ್ಯುತ್ ಪ್ರಸರಣ ಮಾರ್ಗವನ್ನು ಅಳವಡಿಸುವುದು ಸಾಧ್ಯವಿರುವುದಿಲ್ಲ. ಹಾಗೂ ರೂಟ್-2ರಲ್ಲಿ ಅತೀ ಕಡಿಮೆ ಕುರುಚಲು ಗಿಡಗಳು ಮತ್ತು ಕಡಿಮೆ ಅರಣ್ಯ ಪ್ರದೇಶವಿದ್ದು ಹಾಗೂ ಅರಣ್ಯ ಒತ್ತುವರಿ ಪ್ರದೇಶವಿರುತ್ತದೆ. ಈ ಮಾರ್ಗದಲ್ಲಿ 700.00 ಮೀ ನಷ್ಟು ಕುರುಚಲು ಗಿಡಗಳು ಇರುವ ಅರಣ್ಯ ಪ್ರದೇಶ ಹಾಗೂ 2060.00 ಮೀ ನಷ್ಟು ಅರಣ್ಯ ಒತ್ತುವರಿ ಪ್ರದೇಶವಾಗಿರುತ್ತದೆ. ಆದ್ದರಿಂದ ರೂಟ್-1 ಮತ್ತು ರೂಟ್-3ರನ್ನು ತಿರಸ್ಕರಿಸಿ ರೂಟ್-2ನ್ನು ಉಪಯೋಗಿ ಸಂಸ್ಥೆಯು ಅಳವಡಿಸಿಕೊಂಡಿದೆ ಎಂದು ಉಪಯೋಗಿ ಸಂಸ್ಥೆಯ ಮಾಹಿತಿಯ ಅನುಸಾರ ತಿಳಿಸಿರುತ್ತಾರೆ. ಸದರಿ ಉಪಯೋಗಿ ಸಂಸ್ಥೆಯು ನೀಡಿರುವ ಮಾಹಿತಿಯು ನೈಜವಾಗಿರುವುದು ಸ್ಥಳ ಪರಿಸೀಲನೆಯಿಂದ ಖಾತ್ರಿಯಾಗಿದೆ ಆದ್ದರಿಂದ ರೂಟ್-1 ಮತ್ತು ರೂಟ್-3 ನ್ನು ತಿರಸ್ಕರಿಸಿ ರೂಟ್-2ನ್ನು ಆಯ್ಕೆ ಮಾಡ ಬಹುದಾಗಿದೆ ಎಂದು ಎಂದು ಘಟಕಾದಿಕಾರಿಗಳು ತಮ್ಮ ವರದಿಯಲ್ಲಿ ಉಲ್ಲೇಖಿಸಿರುತ್ತಾರೆ ಮತ್ತು ವಲಯ ಅರಣ್ಯಾಧಿಕಾರಿ ಶಿರಾಳಕೊಪ್ಪ ಇವರ ವರದಿಯನ್ನು ಉಲ್ಲೇಖ (4)ರಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಅನುಮೋದಿಸಿರುತ್ತಾರೆ.

ಆದ್ದರಿಂದ ಘಟಕಾಧಿಕಾರಿಗಳ ವರದಿಯನ್ನು ನಾನೂ ಸಹ ಅನುಮೋದಿಸುತ್ತಿದ್ದು ವರದಿಯ ಅನುಸಾರ ಉಪಯೋಗಿ ಸಂಸ್ಥೆಯವರು ಈ ಯೋಜನೆಗೆ ಸಂಬಂಧಿಸಿದಂತೆ ಅನ್ವೇಷಿಸಿರುವ ಮೂರು ಮಾರ್ಗಗಳಲ್ಲಿ ರೂಟ್-1 ಮತ್ತು ರೂಟ್-3ರಲ್ಲಿ ಹೆಚ್ಚಿನ ಅರಣ್ಯ ಪ್ರದೇಶವಿರುವುದು ಹಾಗೂ ಗುಡ್ಡಗಳು ಇರುವುದರಿಂದ ಮತ್ತು ರೂಟ್-2ರಲ್ಲಿ ಕುರುಚಲು ಗಿಡಗಳಿರುವ ಕಡಿಮೆ ಅರಣ್ಯ ಪ್ರದೇಶ ಮತ್ತು ಅರಣ್ಯ ಒತ್ತುವರಿ ಪ್ರದೇಶ ಇರುವುದರಿಂದ ಈ ಯೋಜನೆಗೆ ಸಂಬಂಧಿಸಿದಂತೆ ಉಪಯೋಗಿ ಸಂಸ್ಥೆಗೆ ರೂಟ್-1 ಮತ್ತು ರೂಟ್-3ನ್ನು ತಿರಸ್ಕರಿಸ ಬಹುದಾಗಿದ್ದು, ರೂಟ್-2ರ ಪ್ರದೇಶವನ್ನು ಉಪಯೋಗಿಸಿಕೊಳ್ಳಲು ಉಪಯೋಗಿ ಸಂಸ್ಥೆಗೆ ಅನುಮತಿ ನೀಡಬಹುದಾಗಿ ಅಭಿಪ್ರಾಯವನ್ನು ನೀಡುತ್ತಾ, ಈ ಪತ್ರದೊಂದಿಗೆ ಉಪಯೋಗಿ ಸಂಸ್ಥೆಯವರು ಒದಗಿಸಿರುವ ಪರ್ಯಾಯ ಮಾರ್ಗಗಳ ಗ್ರಾಮ ನಕಾಶೆ ಹಾಗೂ ಟೋಪೋ ನಕಾಶೆಗಳ 06 ಸೆಟ್‌ಗಳನ್ನು ಇಂಕ್ ಸಹಿಯೊಂದಿಗೆ ತಮ್ಮ ಅವಗಾಹನೆಗೆ ಸಲ್ಲಿಸುತ್ತಿದ್ದೇನೆ.

ತಮ್ಮ ನಂಬುಗೇಯ
ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ

**ಪ್ರತಿಯನ್ನು** ಗೌರವಗಳೊಂದಿಗೆ ಮಾನ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಧಿಕಾರಿಗಳು (ಅರಣ್ಯ ಸಂರಕ್ಷಣೆ) ಮತ್ತು ನೋಡಲ್ ಅಧಿಕಾರಿ (ಅಸಂಕಾ) ಅರಣ್ಯ ಭವನ ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ

-9 OCT 2020